ರಚಿತವಾಗಿದ್ದ ಸದನ ಸಮಿತಿಗಳ ವರದಿ ಮೇಲೆ ಕ್ರಮ ಕೈಗೊಳ್ಳಲು ಅಧಿಕಾರ ನೀಡುತ್ತದೆ.

ಶ್ರೀ ಎಸ್. ಸುರೇಶ್ ಕುಮಾರ್ (ನಗರಾಭಿವೃದ್ಧಿ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ, ಪೌರಾಡಳಿತ ಮತ್ತು ಸ್ಥಳೀಯ ಸಂಸ್ಥೆಗಳು ಹಾಗೂ ಬೆಂಗಳೂರು ಜಲಮಂಡಲಿ ಸಚಿವರು): ಸನ್ಮಾನ್ಯ ಸಭಾಧ್ಯಕ್ಷರೆ, ಇವತ್ತು ಬೆಳಗ್ಗೆ ಸದನದಲ್ಲಿ 30–12–2009 ಮತ್ತು 11–10–2010 ಅಂದರೆ ಈ ಸದನದ ಸಭಾಧ್ಯಕ್ಷರ ಚುನಾವಣೆಯ ದಿವಸ ಮತ್ತು ವಿಶ್ವಾಸಮತ ಯಾಚನೆ ಸಂದರ್ಭದಲ್ಲಿ ಸದನದಲ್ಲಿ ನಡೆದ ಅಹಿತಕರ ಘಟನೆಗಳಿಗೆ ಸಂಬಂಧಿಸಿದಂತೆ ರಚಿತವಾಗಿದ್ದ ಎರಡು ಸದನ ಸಮಿತಿಗಳು ಮಂಡಿಸಿರುವ ವರದಿಗಳ ಮೇಲೆ ಸೂಕ್ತ ಕ್ರಮ ಕೈಗೊಳ್ಳುವ ಸಲುವಾಗಿ ಈ ಸದನ ತಮಗೆ ಅಧಿಕಾರ ನೀಡುತ್ತದೆ ಎಂಬ ಪ್ರಸ್ತಾವನೆಯನ್ನು ಸಭೆಯ ಮುಂದೆ ಮಂಡಿಸುತ್ತೇದ್ದೇನೆ.

ಅಧ್ಯಕ್ಷರು: ಮಾನ್ಯ ಸಚಿವರು ಮಂಡಿಸಿದ ಸದನದ ಸಹಮತಿ ಇದೆ ಎಂದು ಭಾವಿಸುತ್ತೇನೆ.

16. ಹದಿಮೂರನೇ ವಿಧಾನ ಸಭೆಯ ಎಂಟನೇ ಅಧಿವೇಶನದ ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ:

ಅಧ್ಯಕ್ಷರು: 2011ನೇ ಸಾಲಿನಲ್ಲಿ ಬಹುಶಃ ಹೊಸ ವರ್ಷದ ಪ್ರಾರಂಭದ ಪದ್ಧತಿಯಂತೆ ರಾಜ್ಯಪಾಲರ ಜಂಟಿ ಅಧಿವೇಶನವನ್ನು ಕರೆಯಲಾಗಿತ್ತು. ಒಟ್ಟು 10 ದಿವಸಗಳವರೆಗೆ ಈ ಅಧಿವೇಶನ ನಡೆಯ ಬೇಕೆಂದು ಸರ್ಕಾರದ ಕಡೆಯಿಂದ ಸೂಚನೆ ಕೂಡ ಬಂದಿತ್ತು. ಈ ಅವಧಿಯಲ್ಲಿ ಅನೇಕ ವಿಚಾರಗಳ ಬಗ್ಗೆ ಚರ್ಚೆ ಮಾಡಬೇಕು ಮತ್ತು ಈ ಸದನದ ಮುಖಾಂತರ ಒಳ್ಳೆಯ ಸಂದೇಶವನ್ನು ಇಡೀ ಕರ್ನಾಟಕದ ಜನತೆಗೆ ಕೊಡಬೇಕೆಂದು ಇತ್ತು. ಆದರೆ, ಅತ್ಯಂತ ನೋವಿನಿಂದ ಹೇಳುವುದಾದರೆ, ಈ ವಿಧಾನಸಭೆಯ ಒಂದು ಚರಿತ್ರೆಯಲ್ಲಿಯೇ ಪ್ರಥಮ ಬಾರಿಗೆ ರಾಜ್ಯಪಾಲರ ಭಾಷಣವನ್ನು ಬಹಿಷ್ಕರಿಸುವಂಥ ಮತ್ತು ಓದಲಿಕ್ಕೆ ಬಿಡದೆ ಇರುವಂಥ ಘಟನೆಗಳು ನಡೆಯಿತು. ಅದಾದ ನಂತರ, ಪದ್ಧತಿಯಂತೆ ಸದನ ಸಲಹಾ ಸಮಿತಿಯನ್ನು ನಾನು ಕರೆದಿದ್ದೆ. ಯಾವ್ಯಾವ ವಿಚಾರಗಳನ್ನು ಸದನದಲ್ಲಿ ಮಂಡಿಸಬೇಕು ಮತ್ತು ಪ್ರಸ್ತಾಪ ಮಾಡಬೇಕು ಹಾಗೂ ಸದನ ಹೇಗೆ

ನಡೆಸಬೇಕೆಂಬುದನ್ನು ಕೂಡ ಚರ್ಚೆ ಮಾಡುವುದಕ್ಕೆ ಸದನ ಸಲಹಾ ಸಮಿತಿಯನ್ನು ಕರೆದಿದ್ದಾಗ ನಮ್ಮ ಎಲ್ಲಾ ಗೌರವಾನ್ವಿತ ವಿರೋಧಪಕ್ಷದ ಸದಸ್ಯರು ಆ ಸಭೆಗೆ ಬರಲಿಲ್ಲ. ಆ ಸಭೆಯಲ್ಲಿ ಕುಳಿತಿದ್ದಂತ ನಾವುಗಳು ಅನೇಕ ಸಲ ಮತ್ತೆ ಮತ್ತೆ ಅವರಿಗೆ ಹೇಳಿ ಕಳುಹಿಸಿದರೂ ಕೂಡ ಆ ಸಭೆಯಲ್ಲಿ ಭಾಗವಹಿಸಲಿಲ್ಲ. ತದನಂತರ ಅನೇಕ ಘಟನೆಗಳು ನಡೆಯಿತು. ಒಂದೇ ಒಂದು ವಿಚಾರವನ್ನು ಎತ್ತಿಕೊಂಡು ಇಂಥದ್ದೆ ರೂಪದಲ್ಲಿ ಚರ್ಚೆ ಆಗಬೇಕೆಂದು ಒತ್ತಡವನ್ನು ಹೇರಿದ್ದನ್ನು ನಾವೆಲ್ಲ ಗಮನಿಸಿದ್ದೇವೆ. ಆದರೆ, ಚರ್ಚೆಗೆ ಮುಕ್ತ ಅವಕಾಶ ಇದೆ. ಬೇರೆ ರೂಪದಲ್ಲಿ ಚರ್ಚೆ ಮಾಡಬಹುದು, ರಾಜ್ಯಪಾಲರ ಭಾಷಣದಲ್ಲೂ ಕೂಡ ಮಾತನಾಡುವುದಕ್ಕೆ ಮುಕ್ತ ಅವಕಾಶಗಳು ಇದೆ ಎಂದು ಹೇಳಿದರೂ ಕೂಡ ಏಕೋ ಒಂದೇ ಒಂದು ವಿಚಾರವನ್ನು ಇಟ್ಟುಕೊಂಡು ಬಹುಶಃ ಸದನದ ಕಲಾಪ ಡೆದು ಯಾವ ಸಂದೇಶ ಈ ಸದನದಿಂದ ಹೋಗಬೇಕಾಗಿತ್ತೋ ಅದಕ್ಕೆ ಅವಕಾಶಗಳು ಆಗಲಿಲ್ಲ. ಬಹುಶಃ ಇದು ಅತ್ಯಂತ ನೋವನ್ನು ತರುವಂಥ ವಿಚಾರವಾಗಿದೆ. ಇದರ ಮಧ್ಯದಲ್ಲಿಯೂ ಕೂಡ ನಾನು ಅನೇಕ ಬಾರಿ ಎಲ್ಲಾ ವಿರೋಧಪಕ್ಷದ ನಾಯಕರಿಗೆ ನಾನು ಹೇಳಿಕಳುಹಿಸಿದೆ. ಆದರೂ ಕೂಡ ಯಾರು ಬರಲಿಲ್ಲ. ಕೊನೆಗಳಿಗೆಯಲ್ಲಿಯಾದರು ಪ್ರಯತ್ನ ಮಾಡೋಣವೆಂದು ನಿನ್ನೆ ದಿವಸ ಹೋದರೆ ಬಹುಶಃ ಅವರುಗಳು ವಿಧಾನಸಭೆಯಲ್ಲಿ ಕಾಣುವುದಕ್ಕೆ ಸಿಗಲಿಲ್ಲ. ಈ ರೀತಿಯಾದ ಪ್ರಯತ್ನಗಳನ್ನು ನಾನು ಮಾಡಿದರೂ ಕೂಡ ಅದಕ್ಕೆ ಸ್ಪಂದನವಂತೂ ಸಿಗಲಿಲ್ಲ. ಈ ಅಧಿವೇಶನ ನಡೆಯಬೇಕಾದರೆ ಕೇವಲ ವಿರೋಧಪಕ್ಷದವರ ಸಹಕಾರ ಮಾತ್ರ ಕೇಳುವುದಲ್ಲ, ಎರಡು ಪಕ್ಷದವರು ಒಟ್ಟಿಗೆ ಸೇರಿ ಅಂದರೆ, ಆಡಳಿತ ಪಕ್ಷ ಮತ್ತು ವಿರೋಧ ಪಕ್ಷದವರು ಸಹಕಾರ ಕೊಟ್ಟರೆ ಮಾತ್ರ ಸದನವನ್ನು ಸುಗಮವಾಗಿ ನಡೆಸಿಕೊಂಡು ಹೋಗಲಿಕ್ಕೆ ಸಾಧ್ಯವಾಗುತ್ತದೆ. ಆ ಮೂಲಕ ಒಂದು ಒಳ್ಳೆಯ ಸಂದೇಶವನ್ನು ಕೊಡುವುದಕ್ಕೆ ಆಗುತ್ತದೆ. ಆದರೆ, ದುರ್ದೈವ ಆ ಒಂದು ಸಂದೇಶವನ್ನು ಇವತ್ತು ಕೊಡುವುದಕ್ಕೆ ಆಗಲಿಲ್ಲ. ಈ ವಿಧಾನ ಸಭೆಯಲ್ಲಿರುವ ಶಾಸಕರು ಅಂದರೆ ನಾವುಗಳು ಶಾಸನ ಮಾಡುವವರು ಅಂದರೆ legislation making ಎಂದು ಹೇಳುವಂಥ ಪದಕ್ಕೆ ಅರ್ಥವೇ ಇಲ್ಲವೋ ಎನ್ನುವ ರೀತಿಯಲ್ಲಿ ಇವತ್ತು ಆಗಿ ಹೋಗಿದೆ. ನನಗಂತೂ ಬಹಳ ನೋವಾಗಿದೆ.

ಮುಂದೆ ಬರುವಂಥ ಅಧಿವೇಶನದಲ್ಲಿ ಏನೇ ಇದ್ದರೂ ಎರಡು ಕಡೆಯವರು ಚರ್ಚಿಸಿ ಏನು ಸಮಸ್ಯೆಗಳಿವೆ ಅವುಗಳನ್ನು ಚರ್ಚೆ ಮುಖಾಂತರ ಒಂದು ಸಹಮತದೊಂದಿಗೆ ಸದನವನ್ನು ನಡೆಸುವಂಥ ಕೆಲಸ ಆಗಬೇಕು. ಮತ್ತೆ ಎಲ್ಲಾ ವಿಚಾರಗಳ ಜೊತೆಗೆ ಸರ್ಕಾರದ ವೈಫಲ್ಯತೆಗಳು ಏನಿವೆ ಅವುಗಳನ್ನು ಹೇಳಿ ಅವುಗಳನ್ನು ತಿದ್ದಿ ಸರಿಮಾಡುವಂಥ ಕೆಲಸ ಅವರಿಂದ ಆಗಬೇಕು. ಆದ್ದರಿಂದ, ಇನ್ನು ಮುಂದೆಯಾದರು ಸಹಕಾರ ಕೊಡಬೇಕೆಂಬ ಮಾತನ್ನು ಹೇಳಿ, ನಡೆದಂಥ ಈ ಒಂದು ಕಲಾಪಕ್ಕೆ ಸಹಕರಿಸಿದಂಥ ತಮಗೆಲ್ಲರಿಗೂ ನಾನು ಅಭಿನಂದನೆಗಳನ್ನು ಹೇಳುತ್ತಿದ್ದೇನೆ. ಈಗ ಸದನವನ್ನು ಅನಿರ್ದಿಷ್ಟಕಾಲದ ಅವಧಿಯವರಿಗೆ ಮುಂದೂಡಲಾಗಿದೆ.

ಸದನವು ಸಂಜೆ 4 ಗಂಟೆ 3 ನಿಮಿಷಕ್ಕೆ ಮುಕ್ತಾಯಗೊಂಡು, ಅನಿರ್ದಿಷ್ಟಕಾಲದ ಅವಧಿಯವರೆಗೆ ಮುಂದೂಡಲಾಯಿತು.

17. ಅನುಬಂಧ – 1

ಚುಕ್ಕೆಗುರುತಿನ ಪ್ರಶ್ನೋತ್ತರ

ಬಸವ ಕಲ್ಯಾಣ ಮತಕ್ಷೇತ್ರದ ಮಿರಕಲ್ ಗ್ರಾಮದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಸ್ಥಾಪನೆ

44 (457): ಶ್ರೀ ಬಸವರಾಜ್ ಪಾಟೀಲ್ ಅಟ್ಟೂರು (ಬಸವಕಲ್ಯಾಣ): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬಸವಕಲ್ಯಾಣ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಮಿರಕಲ್ ಗ್ರಾಮದಲ್ಲಿನ ಜನರಿಗೆ ಪ್ರಾಥಮಿಕ ಆರೋಗ್ಯ ಕೇಂದ್ರದ ಸೌಲಭ್ಯ ಇದೆಯೇ;

ಆ) ಈ ಗ್ರಾಮದ ಜನರು ತುರ್ತು ಸಂದರ್ಭಗಳಲ್ಲಿ ಆರೋಗ್ಯದ ಸಮಸ್ಯೆಗಳು ಉಂಟಾದಾಗ ಇಲ್ಲಿಂದ ದೂರದಲ್ಲಿರುವ ಬಸವಕಲ್ಯಾಣ ಅಥವಾ ಹುಲಸೂರಿಗೆ ಹೋಗುವಂತಹ ಪರಿಸ್ಥಿತಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಈ ಗ್ರಾಮದಲ್ಲಿ ಆರೋಗ್ಯ ಕೇಂದ್ರವನ್ನು ಸ್ಥಾಪಿಸುವಂತೆ ಈ ಕ್ಷೇತ್ರದ ಜನಪ್ರತಿನಿಧಿ ಹಾಗೂ ಗ್ರಾಮದ ಜನರು ಸರ್ಕಾರಕ್ಕೆ ಮನವಿ ಸಲ್ಲಿಸಿರುವುದು ನಿಜವಲ್ಲವೇ;